ಮಾಡಿಕೊಂಡರು. ಕಾಲೇಜಿನಲ್ಲಿ ಓದುತ್ತಿರುವಾಗಲೇ 'ಪ್ರೋಗ್ರೆಸ್ಸಿವ್ ರಾಕ್ ಬ್ಯಾಂಡ್' ಗೆ ಸೇರಿ ಸಂಗೀತ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರು. ಕೀಬೋರ್ಡ್ ಕಲಿಯುವ ಮೂಲಕ ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದ ಇವರು ಏಂಜೆಲ್ ಡಸ್ಟ್ ಅವರ ಬಳಿ ಕೀಬೋರ್ಡ್ ಕಲಿತರು. ವಿಶ್ವದ ನಾನಾ ದೇಶಗಳ ಸಂಗೀತಗಾರರನ್ನು ಸಂಪರ್ಕಿಸುವುದರ ಜತೆಗೆ ಪರಿಸರ ಕಾಳಜಿಯಿಂದಾಗಿ ಜಗತ್ತಿನ ಅನೇಕ ದೇಶಗಳನ್ನೂ ಸುತ್ತಿದ್ದಾರೆ. ಪ್ರಕೃತಿಯೊಂದಿಗೆ ಬೆರೆತ ಸಂಗೀತ ಸಾರದ ಹೂರಣವನ್ನು ಆಯ್ದುಕೊಂಡು ಹಲವಾರು ಮೌಲ್ಯಯುತ ಸಂಗೀತ ಸಂಯೋಜಿಸಿ, ಆಲ್ಬಂಗಳ ನಿರ್ಮಾಣದ ಹೊಣೆಯನ್ನೂ ನಿಭಾಯಿಸಿದವರು. 2015ರಲ್ಲಿ 57ನೇ ಗ್ರಾಮ್ಮಿ ಪ್ರಶಸ್ತಿ ಇವರಿಗೆ ಒಲಿದುದು ಕೂಡ ಇವರ 'ಸಂಗೀತ–ಪರಿಸರ' ಕಾಳಜಿಗೋಸ್ಕರವೇ. ಈ ಕಾಳಜಿ ಇವರ 'ಶಾಂತಿ ಸಂಸಾರ' ಆಲ್ಬಂನಲ್ಲಿ ವ್ಯಕ್ತವಾಗಿದೆ.

ಸಿನಿಮಾ ಸಂಗೀತಕ್ಕೂ ರಿಕ್ಕಿ ಕೇಜ್ ಕೊಡುಗೆ ನೀಡಿದ್ದಾರೆ. ಆ್ಯಕ್ಸಿಡೆಂಟ್ (2008), ವೆಂಕಟ ಇನ್ ಸಂಕಟ (2009), ಕ್ರೇಜಿ ಕುಟುಂಬ..(2010).. ಹೀಗೆ ಕನ್ನಡದ ಮೂರು ಸಿನಿಮಾಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ರೇಡಿಯೊ ಹಾಗೂ ದೂರದರ್ಶನಗಳಿಗೆ ಸುಮಾರು 3000 ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದವರು. 2011ರಲ್ಲಿ ಢಾಕಾದಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್‌ನ ಉದ್ಘಾಟನಾ ಸಮಾರಂಭದ ಹಾಡಿಗೆ ಇವರದೇ ಸಂಗೀತ ಸಂಯೋಜನೆ. 2016ರಲ್ಲಿ ಜೈಪುರದಲ್ಲಿ ನಡೆದ 'ಸೇವ್ ದ ಚಿಲ್ಡ್ರನ್' ವಿಶ್ವ ಜಾಗೃತಿ ಸಮಾವೇಶದಲ್ಲಿ ಉನ್ನತ ಜವಾಬ್ದಾರಿ ನಿಭಾವಣೆ, 2016ರ ಜುಲೈಯಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ 'ಶಾಂತಿ ಸಂಸಾರ' ಸಂಗೀತ ಉತ್ಸವ ಆಯೋಜಿಸಿ ಯಶಸ್ವಿಯಾದದ್ದು ಇನ್ನೂ ಸಂಗೀತಪ್ರಿಯರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.

ಇತ್ತೀಚೆಗೆ ರಿಕ್ಕಿಗೆ ವಿಶ್ವಸಂಸ್ಥೆಯ 'ಜಾಗತಿಕ ಮಾನವತಾ ಕಲಾವಿದ' ಎಂಬ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು. ದಕ್ಷಿಣ ಆಫ್ರಿಕಾದ ಅತ್ಯುತ್ತಮ ಸಂಗೀತ ನಿರ್ಮಾಪಕ ಪ್ರಶಸ್ತಿ, ಇವರ ಆಲ್ಬಂಗೆ ವರ್ಷದ ಅತ್ಯುತ್ತಮ ಪ್ರಶಸ್ತಿ ನ್ಯೂ ಓರ್ಲೀನ್ಸ್‌ನ 'ಜೋನ್ ಮ್ಯೂಸಿಕ್ ಅವಾರ್ಡ್' ಲಭಿಸಿದೆ. ಭಾರತದ 'ಸೆಂಟರ್ ಫಾರ್ ಕಾನ್ಷಿಯಸ್ ಕ್ರಿಯೇಟಿವಿಟಿ ಪ್ರಶಸ್ತಿ, ಪ್ರೈಡ್ ಆಫ್ ಕರ್ನಾಟಕ, ಯುತ್ ಐಕಾನ್ ಆಫ್ ಇಂಡಿಯಾ ಗೌರವಗಳೂ ಸಂದಿವೆ.

ರೌಂಡ್ ಗ್ಲಾಸ್ ಎಂಬುದು ರಿಕ್ಕಿ ನಡೆಸುತ್ತಿರುವ ಸಂಸ್ಥೆ. ಒಬ್ಬ ವ್ಯಕ್ತಿಯ ಜೀವನ ಪಯಣ ಚೆನ್ನಾಗಿರಬೇಕು, ಅದರಲ್ಲಿ ಪರಿಸರ ಪ್ರಜ್ಞೆ ಕೂಡಿರಬೇಕು, ಈ ನಿಟ್ಟಿನಲ್ಲಿ ಜನರನ್ನು ಸಬಲೀಕರಿಸುವ ಕೆಲಸವನ್ನು ರೌಂಡ್‌ಗ್ಲಾಸ್ ಮಾಡುತ್ತಿದೆ. ಸಮಗ್ರ ಮತ್ತು ನಿರಂತರ ಪರಿಹಾರಗಳನ್ನು ಕಲ್ಪಿಸುವ ಮೂಲಕ ಜನರು ಉತ್ತಮ ಜೀವನ ನಿರ್ವಹಣೆ ಮಾಡಬೇಕು ಎನ್ನುವುದು ಇದರ ಉದ್ದೇಶ.

'ಮನಸ್ಸು, ದೇಹ ಹಾಗೂ ಪರಿಸರವನ್ನು ಬೆಸೆದಲ್ಲಿ ಅದು ಪೂರಕವಾಗಿ ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ಇತರ ಎಲ್ಲ ರೀತಿಯಲ್ಲಿ ಉತ್ತಮ ಜೀವನ ನಡೆಸಲು ಸಹಕಾರ ನೀಡುತ್ತದೆ ಎನ್ನುವ ಸಿದ್ಧಾಂತದ ಮೇಲೆ 'ರೌಂಡ್‌ಗ್ಲಾಸ್' ಕೆಲಸ ಮಾಡುತ್ತದೆ' ಎನ್ನುತ್ತಾರೆ ರಿಕ್ಕಿ.

'ರೌಂಡ್‌ಗ್ಲಾಸ್ ಸಂಸಾರ ಉತ್ಸವ' ಕೇವಲ ಜಾಗೃತಿ ಮೂಡಿಸುವ ಉದ್ದೇಶವನ್ನಷ್ಟೇ ಹೊಂದಿಲ್ಲ, ಬದಲಾಗಿ ಪರಿಸರ ಪ್ರಜ್ಞೆಯನ್ನು ಮೂಡಿಸುವ ಗುರಿಯನ್ನೂ ಹೊಂದಿದೆ' ಎನ್ನುತ್ತಾರೆ ರಿಕ್ಕಿ. 'ಕಲೆ ಜನರ ಮೇಲೆ ಬಹಳ ಪ್ರಭಾವ ಬೀರುತ್ತದೆ. ಕಲೆ ನೀಡುವ ಸಂದೇಶ ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇದನ್ನು ಒಬ್ಬ ಕಲಾವಿದನಾಗಿ ನಾನು ಬಲ್ಲೆ' ಎನ್ನುವ ರಿಕ್ಕಿ ಕೇಜ್, 'ಇಂತಹ ಉತ್ಸವಗಳಿಂದ ಜಗತ್ತಿನ ಭವಿಷ್ಯ ಉತ್ತಮಗೊಳ್ಳುತ್ತದೆ ಎಂಬುದು ನನ್ನ ನಂಬಿಕೆ' ಎನ್ನುತ್ತಾರೆ.

ಹವಾಮಾನ ವೈಪರೀತ್ಯದಿಂದ ಜಗತ್ತಿನ ನಾನಾ ಕಡೆ ಪದೇ ಪದೇ ಆಗುತ್ತಿರುವ ಕಂಟಕಗಳು ಹಾಗೂ ನಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಾಕಷ್ಟು ವೈಜ್ಞಾನಿಕ ಮಾಹಿತಿ ಎಲ್ಲೆಡೆ ಲಭ್ಯವಿದೆ. ಇವೆಲ್ಲವನ್ನೂ ಕ್ರೋಢೀಕರಿಸಿ ಭೂಮಿಯನ್ನು ಜೋಪಾನ ಮಾಡುವ ಕೆಲಸ ಆಗಬೇಕಾಗಿದೆ. ಪ್ರಕೃತಿ–ಮಾನವ– ವಿಜ್ಞಾನ ಇವೆಲ್ಲವನ್ನೂ ಒಂದುಗೂಡಿಸುವ ಕೆಲಸವನ್ನು ಸಾಂಸ್ಕೃತಿಕ–ಸಂಗೀತ ಉತ್ಸವ ಮಾಡಬಲ್ಲದು ಎಂಬುದು ರಿಕ್ಕಿ ಅವರ ಬಲವಾದ ನಂಬಿಕೆ.

### ಸಿನಿಮಾ-ಸಂಗೀತ-ಚಿತ್ರಕಲೆ..

ಬೆಂಗಳೂರಿನಲ್ಲಿ ರಿಕ್ಕಿ ಕೇಜ್ ನೇತೃತ್ವದ ರೌಂಡ್‌ಗ್ಲಾಸ್ ಸಂಸಾರ ಸಂಸ್ಥೆ ಸಂಗೀತ ಉತ್ಸವವನ್ನು ಅಕ್ಟೋಬರ್ 2ರಿಂದ ಐದು ದಿನಗಳ ಕಾಲ ಏರ್ಪಡಿಸಿದೆ. ಈ ಉತ್ಸವದಲ್ಲಿ ಪರಿಸರ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಪರಿಸರ ಚಿತ್ರಕಲಾ ಪ್ರದರ್ಶನ, ಸಿನಿಮಾ ಉತ್ಸವ, ಸಂಗೀತ ಕಛೇರಿಗಳು ನಡೆಯಲಿವೆ. ಸಂಗೀತವೂ ಸೇರಿದಂತೆ ಎಲ್ಲ ಕಾರ್ಯಕ್ರಮಗಳೂ ಪರಿಸರ ಸಂರಕ್ಷಣೆಯ ವಿಚಾರದ ಮೇಲೆಯೇ ನಡೆಯುತ್ತದೆ ಎಂಬುದು ಗಮನಾರ್ಹ. ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಸುಚಿತ್ರಾ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಯುಬಿ ಸಿಟಿ, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಹಾಗೂ ವಿಧಾನಸೌಧದ ಮೆಟ್ಟಿಲುಗಳ ಮೇಲೆ ವಿಶಿಷ್ಟವಾಗಿ ಈ ಕಾರ್ಯಕ್ರಮಗಳು ನಡೆಯುತ್ತವೆ. ಚಿತ್ರಕಲೆ, ಸಿನಿಮಾ ಹಾಗೂ ಸಂಗೀತದಲ್ಲಿ ಖ್ಯಾತರಾಗಿರುವ ದೇಶ ವಿದೇಶಗಳ ಹಲವಾರು ಕಲಾವಿದರು ಭಾಗವಹಿಸುವರು. ಗ್ರಾಮ್ಮಿ ಪ್ರಶಸ್ತಿ ವಿಜೇತ ದಕ್ಷಿಣ ಆಫ್ರಿಕಾದ ಖ್ಯಾತ ಕೊಳಲು ವಾದಕ ವೂಟರ್ ಕೆಲ್ಲರ್‌ಮನ್, ಘಾನಾದ ರಾಕಿ ಡಾವುನಿ, ಕರ್ನಾಟಕದ ಹಿರಿಯ ರಂಗಭೂಮಿ ಕಲಾವಿದೆ ಬಿ. ಜಯಶ್ರೀ, ವೀಣಾವಾದಕಿ ಸುಮಾ ಸುಧೀಂದ್ರ, ಗಾಯಕಿ ಎಂ.ಡಿ.ಪಲ್ಲವಿ, ಡ್ರಮ್ಸ್ ವಾದಕ ಬಿ.ಎಸ್. ಅರುಣ್‌ಕುಮಾರ್, ಕೊಳಲು ವಾದಕಿ ವಾರಿಜಾಶ್ರೀ, ಫ್ಯೂಷನ್ ಗಾಯಕಿ ಸುಮಾರಾಣಿ, ತಬಲಾ ವಾದಕ ವೇಣುಗೋಪಾಲ್ ಮುಂತಾದವರು ರೌಂಡ್‌ಗ್ಲಾಸ್ ಸಂಸಾರ ಉತ್ಸವದಲ್ಲಿ ರಂಜಿಸಲಿರುವುದು ವಿಶೇಷ. ■



ಚಿತ್ರ: ಕಿಶೋರ್ ಕುಮಾರ್ ಬೋಳಾರ್